**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ**

ಸಿಸಿ.ನಂ. 72/2025

| | | |
|---|---|---|
| ಸಾಕ್ಷಿಯ ಹೆಸರು | ಜೆ ಡಿ ಮಂಜುನಾಥ | |
| ತಂದೆಯ ಹೆಸರು | ದ್ಯಾವಪ್ಪ | |
| ವಯಸ್ಸು | 50 ವರ್ಷ | |
| ಉದ್ಯೋಗ | ವ್ಯಾಪಾರ | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ನಾಯಂಡಹಳ್ಳಿ<br>ಬೆಂಗಳೂರು | |

ದಿನಾಂಕಃ **11-02-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1) ದೂರುದಾರರು ನನಗೆ ಮೂರು ವರ್ಷಗಳಿಂದ ಪರಿಚಯ ಇರುತ್ತಾರೆ. ದೂರುದಾರರ ಗಂಡ ತನಗ ಸೇರಿದ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿ ದೂರುದಾರರನ್ನು ಪರಿಚಯ ಮಾಡಿರುತ್ತಾನೆ. ನನ್ನ ಮತ್ತು ದೂರುದಾರರ ಗಂಡನ ನಡುವೆ ದಿನಾಂಕ 19.12.2023 ರಂದು ಸ್ಥಿರ ಸ್ವತ್ತಿನ ಬಗ್ಗೆ ಕ್ರಯದ ಕರಾರು ಆಗಿರುತ್ತದೆ. ಸದರಿ ಕರಾರು ಪತ್ರವನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು **ನಿಶಾನೆ.ಡಿ-1** ಎಂದು ಗುರುತಿಸಲಾಯಿತು. ಅದೇ ದಿನ ನನ್ನ ಮತ್ತು ದೂರುದಾರರ ನಡುವೆ ಸ್ಥಿರ ಸ್ವತ್ತಿನ ಬಗ್ಗೆ ಕ್ರಯ ಕರಾರು ಆಗಿರುತ್ತದೆ ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು **ನಿಶಾನೆ.ಡಿ-2** ಎಂದು ಗುರುತಿಸಲಾಯಿತು. ಸದರಿ ಆಸ್ತಿಗಳು ರೂ. 98 ಲಕ್ಷಕ್ಕೆ ನಿಗದಿ ಆಗಿರುತ್ತವೆ.

2) ನಾನು ದೂರುದಾರರಿಂದ ಸಾಲವಾಗಿ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ. ಕರಾರು ಪತ್ರ ಆಗುವ ಕಾಲಕ್ಕೆ ಬಾಕಿ ಇರುವ ಪ್ರತಿಫಲದ ಹಣಕ್ಕಾಗಿ ದೂರುದಾರರಿಗೆ ಸಹಿ ಮಾಡಿದ ಖಾಲಿ ಚೆಕ್ಕನ್ನು ನೀಡಿರುತ್ತೇನೆ. ದೂರುದಾರರ ಸಂಬಂಧಿಕರು ಮಾನ್ಯ ಹೊಳೆನರಸೀಪುರ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ. ಅಸಲು ದಾವೆ ಸಂಖ್ಯೆ9/2024 ರ ವಾದ ಪತ್ರದ ದೃಡೀಕೃತ ನಲಕಲನ್ನು ಹಾಜರುಪಡಿಸುತ್ತೇನೆ ಸದರಿ

ದಾಖಲೆಯನ್ನು **ನಿಶಾನೆ.ಡಿ-3** ಎಂದು ಗುರುತಿಸಲಾಯಿತು ಮತ್ತು ಆದೇಶಪುಟದ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು **ನಿಶಾನೆ.ಡಿ-4** ಎಂದು ಗುರುತಿಸಲಾಯಿತು. ಅಸಲು ದಾವೆ ಸಂಖ್ಯೆ 139/2024 ರ ವಾದಿ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು **ನಿಶಾನೆ.ಡಿ-5** ಎಂದು ಗುರುತಿಸಲಾಯಿತು. ಅಸಲು ದಾವೆ ಸಂಖ್ಯೆ 139/2024 ರ ಆದೇಶ ಪುಟದ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು **ನಿಶಾನೆ.ಡಿ-6** ಎಂದು ಗುರುತಿಸಲಾಯಿತು. ನನ್ನ ಬ್ಯಾಂಕಿನ ಖಾತೆಯ ಸ್ಟೇಟಮೆಂಟ್ ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು **ನಿಶಾನೆ.ಡಿ-7** ಎಂದು ಗುರುತಿಸಲಾಯಿತು.

3) ದೂರುದಾರರು ಕರಾರು ಪತ್ರದದಲ್ಲಿ ನಮೂದುಮಾಡಿರುವ ಬಾಕಿ ಹಣವನ್ನು ಪಾವತಿ ಮಾಡುವಂತೆ ಕೇಳಿದ್ದು, ನಾನು ಸದರಿ ಸ್ವತ್ತುಗಳ ಬಗ್ಗೆ ನ್ಯಾಯಾಲಯದಲ್ಲಿ ವಿವಾದ ಇರುವುದರಿಂದ ಮತ್ತು ಸದರಿ ದಾವೆಗಳನ್ನು ಇತ್ಯರ್ಥ ಮಾಡಿಕೊಂಡು ಕ್ರಯ ಪತ್ರ ನೋಂದಣಿ ಮಾಡಿ ಕೊಟ್ಟರೆ ಬಾಕಿ ಹಣವನ್ನು ನೀಡುತ್ತೇನೆ ಎಂದು ತಿಳಿಸಿರುತ್ತೇನೆ. ಅದರೆ, ದೂರುದಾರರು ನಾನು ನೀಡಿರುವ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಆದ್ದರಿಂದ ನನ್ನನ್ನು ಪ್ರಕರಣದಿಂದ ಬಿಡುಗಡೆಗೊಳಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.